# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 810
ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 13.07.2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2022-23 ನೇ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಯಾವ ಯಾವ ಇವೆಂಟ್ (ಕಾರ್ಯಕ್ರಮ ನಿರ್ವಹಣಾ ಸಂಸ್ಥೆ) ಸಂಸ್ಥೆಗಳಿಗೆ ನೀಡಲಾಗಿದೆ (ಸಂಪೂರ್ಣ ಮಾಹಿತಿ ಒದಗಿಸುವುದು). | 2022-23 ನೇ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ 2017ನೇ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏಪ್ರಿಲ್ 24, 2022 ರಂದು ಆಯೋಜಿಸಲಾಗಿತ್ತು. ಸದರಿ ಸಮಾರಂಭದ ಆಯೋಜನೆಗಾಗಿ ಮೆ\|\| ಎಂ.ಸಿ & ಎ ಸಂಸ್ಥೆ ಮತ್ತು ಮೆ\|\| ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಕಿಯೋನಿಕ್ಸ್) ಬೆಂಗಳೂರು ಇವರಿಗೆ ಕಾರ್ಯಕ್ರಮ ನಿರ್ವಹಣೆಗೆ ಕಾರ್ಯಾದೇಶ ನೀಡಲಾಗಿರುತ್ತದೆ. |
| ಆ) | ಇವೆಂಟ್ (ಕಾರ್ಯಕ್ರಮ ನಿರ್ವಹಣಾ ಸಂಸ್ಥೆ) ಸಂಸ್ಥೆಗಳ ಮೂಲಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಪಾವತಿ ಮಾಡಲಾದ ಖರ್ಚು ಎಷ್ಟು : (ಸಂಪೂರ್ಣ ವಿವರಗಳನ್ನು ಒದಗಿಸುವುದು). | ಮೆ\|\| ಎಂ ಸಿ & ಎ ಸಂಸ್ಥೆಗೆ ರಾಜ್ಯ ಪ್ರಶಸ್ತಿ ಸಮಾರಂಭದ ಕಲಾ ತಂಡಗಳು, ಹೂವಿನ ಅಲಂಕಾರ ಹಾಗೂ ಬ್ರ್ಯಾಂಡಿಂಗ್‌ಗಾಗಿ ರೂ.22,98,209/- ಗಳನ್ನು ಹಾಗೂ ಮೆ\|\| ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಕಿಯೋನಿಕ್ಸ್) ಬೆಂಗಳೂರು ಇವರಿಗೆ ಸೌಂಡ್ ಮತ್ತು ಲೈಟ್ಸ್, ಮೂಲಭೂತ ಸೌಕರ್ಯ, ಆಡಿಯೋ ವಿಷ್ಯುಯಲ್ಸ್, ವಿದ್ಯುತ್ ಮತ್ತು ಲೈಟಿಂಗ್‌ಗಳಿಗಾಗಿ ರೂ.37,74,879/-ಗಳನ್ನು ಪಾವತಿಸಲಾಗಿದೆ. ಒಟ್ಟು ಖರ್ಚಾಗಿರುವ ಮೊತ್ತ ರೂ. 60,73,088/- |
| ಇ) | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ನೋಂದಾಯಿಸಿಕೊಳ್ಳಲಾಗಿರುವ ಇವೆಂಟ್ ಸಂಸ್ಥೆಗಳೆಷ್ಟು (ಪಟ್ಟಿ ಒದಗಿಸುವುದು). | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಇವೆಂಟ್ (ಕಾರ್ಯಕ್ರಮ ನಿರ್ವಹಣಾ ಸಂಸ್ಥೆ) ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಿಕೊಳ್ಳುವ ಪದ್ಧತಿಯಿರುವುದಿಲ್ಲ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಕಾಯ್ದೆಯಿಂದ ವಿನಾಯಿತಿ ಪಡೆದಿರುವ ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ಮೆ\|\| ಎಂ ಸಿ & ಎ ಸಂಸ್ಥೆ ಹಾಗೂ ಮೆ\|\| ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಕಿಯೋನಿಕ್ಸ್), ಬೆಂಗಳೂರು ಮೂಲಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. |

**ಸಂ: ಕೆಸಿಐ-ಪಿಐಪಿ/141/2023**

(ಸಿದ್ದರಾಮಯ್ಯ)
ಮುಖ್ಯಮಂತ್ರಿ